ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	4(92)
ಮಾನ್ಯ ಸದಸ್ಯರ ಹೆಸರು	ಶ್ರೀ ರಘುನಾಥ್ ರಾವ್ ಮಲ್ಕಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	02-03-2020
ಉತ್ತರಿಸಬೇಕಾದ ಸಚಿವರು	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
(ಅ)	ಬೀದರ್ ಸರ್ಕಾರಿ ಕಾಲೇಜಿನ ಬೋಧಕ ಆಸ್ಪತ್ರೆಯ ಹೊಸ ಕಟ್ಟಡದ ಛಾವಣಿ ಇತರೆ ಕಡೆಗಳಲ್ಲಿ ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:ಬಂದಿದ್ದಲ್ಲಿ, ಸ್ಪಷ್ಟ ಮಾಹಿತಿ ನೀಡುವುದು;	ಬಂದಿದೆ. ಮುಖ್ಯ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರನ್ನು ಒಳಗೊಂಡಂತೆ ರಚಿಸಲಾದ ತನಿಖಾ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಕಟ್ಟಡದ ಮುಖ್ಯ ಸ್ಟ್ರಕ್ಚರ್ ದೃಢವಾಗಿ (Stable) ಹಾಗೂ ಯಥಾವತ್ತಾಗಿದ್ದು (Intact)ಕಟ್ಟಡ ಎಲ್ಲಿಯೂ ಕುಸಿದಿರುವುದಿಲ್ಲ. ಆಸ್ಪತ್ರೆ ಕಟ್ಟಡದ ನಿರ್ವಹಣೆಯಲ್ಲಿ ಕೆಲವು ನ್ಯೂನ್ಯತೆಗಳಿರುವುದಾಗಿ ವರದಿಸಲಾಗಿದೆ.
(ಆ)	2017 ರ ಆಗಸ್ಟ್ ನಲ್ಲಿ ಉದ್ಘಾಟನೆಗೊಂಡ ಆಸ್ಪತ್ರೆಯ ಹೊಸ ಕಟ್ಟಡದ ಛಾವಣಿ ಕುಸಿತಕ್ಕೆ ಕಾರಣವೇನು :(ವಿವರ ನೀಡುವುದು)	ಬ್ರಿಮ್ಸ್ ಆಸ್ಪತ್ರೆಯ ನೂತನ ಆಸ್ಪತ್ರೆ ಕಟ್ಟಡದಲ್ಲಿ ಯಾವುದೇ ಛಾವಣಿ ಕುಸಿತಗೊಂಡಿರುವುದಿಲ್ಲ. ಕಟ್ಟಡ ಕಾಮಗಾರಿ ಮುಗಿದ ಮೇಲೆ ವಿದ್ಯುತ್ ಲೈನ್ ಮತ್ತು ಫೈರ್ ಫೈಟಿಂಗ್ ಪೈಪ್ ಲೈನ್ ಅಳವಡಿಸಲು ಡ್ರಿಲ್ಲಿಂಗ್ ಯಂತ್ರ ಮುಖಾಂತರ ರಂಧ್ರಗಳು ಕೊರೆಯುವ ಸಮಯದಲ್ಲಿ ಉಂಟಾದ ವೈಬ್ರೇಷನ್ ನಿಂದ ಸ್ವಲ್ಪ ಮಟ್ಟದ ಸೀಲಿಂಗ್ ಪ್ಲಾಸ್ಟರ್ (ಗಿಲಾವಾ) ನಲ್ಲಿ ಸೇರಿರುವ ವ್ಯಾಕ್ಯೂಮ್ ಬಿಡುಗಡೆಯಾಗಿರುವುದರಿಂದ ಸ್ಥಳದ ಪ್ಲಾಸ್ಟರ್ ಕಳಚಿ ಬಿದ್ದಿರುತ್ತದೆ. ಈಗಾಗಲೇ ಬಿದ್ದಿರುವ ಪ್ಲಾಸ್ಟರ್ ಅನ್ನು ದುರಸ್ತಿ ಮಾಡಿಸಲಾಗಿದೆ.
(ಇ)	ಕಟ್ಟಡ ನಿರ್ಮಾಣದಲ್ಲಿ ಕಳಪೆ ಕಾಮಗಾರಿಯನ್ನು ನಿರ್ವಹಿಸಿರುವುದರಿಂದ ಈ ರೀತಿ ಛಾವಣಿ ಇತರೆ ಕಡೆಗಳಲ್ಲಿ ಕುಸಿಯಲು ಕಾರಣವಾಗಿರುವುದು ಕಂಡುಬಂದಿದ್ದು, ಇದನ್ನು ನಿರ್ವಹಿಸಿದ ಇಂಜಿನಿಯರ್/ಗುತ್ತಿಗೆದಾರರ ವಿರುದ್ಧ ಇಲ್ಲಿಯವರೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಆಸ್ಪತ್ರೆ ಕಟ್ಟಡದ ನಿರ್ವಹಣೆಯಲ್ಲಿ ಕೆಲವು ನ್ಯೂನ್ಯತೆಗಳು ಕಂಡು ಬಂದಿದ್ದು, ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸಂಸ್ಥೆಯ ವತಿಯಿಂದ ನೋಟೀಸ್ ನೀಡಲಾಗಿರುತ್ತದೆ.

ಸಂ: ಎಂಇಡಿ 73 ಎಂಎಸ್ ಎಫ್ 2020

(ಡಾ: ಕೆ. ಸುಧಾಕರ್)
ಮಾನ್ಯ ವೈದ್ಯಕೀಯ ಶಿಕ್ಷಣ ಇಲಾಖಾ ಸಚಿವರು